**ಓಎಸ್ ನಂಃ 51/2016**

**ಪಿಡಬ್ಲೂಃ 2**

**<u>ಸಾಕ್ಷಿಗೆ ದಿನಾಂಕ 14-02-2025ರಂದು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು</u>**

**<u>ಪಾಟೀ ಸವಾಲುಃ 10ನೇ ಪ್ರತಿವಾದಿ ಪರ ಶ್ರೀ ಜಿ.ಎ.ಡಿ. ಪರ ಶ್ರೀ ಜೆ.ಆರ್.ಕೆ. ವಕೀಲರಿಂದ</u>**

2 ಮತ್ತು 10ನೇ ಪ್ರತಿವಾದಿಗಳು ನನ್ನ ಅತ್ತೆಯಂದಿರು ಇರುತ್ತಾರೆ. ನಾನು 10 ರಿಂದ 12 ವರ್ಷದವನಿದ್ದಾಗ ಜಹೀರಾಬಾದನಲ್ಲಿ ವಾಸವಾಗಿದ್ದೇನು. ನಾನು ಕಳೆದ 8-10 ವರ್ಷಗಳಿಂದ ಜಹೀರಾಬಾದನಲ್ಲಿ ವಾಸಿಸುತ್ತಿದ್ದೇನೆ.

-5-

ಸುಬಾನ್ ಜೀ ಈತನು ಸುಮಾರು 40 ವರ್ಷಗಳ ಹಿಂದೆ ಮರಣ ಹೊಂದಿದ್ದು, ಆತನು ಯಾವ ದಿನಾಂಕ, ತಿಂಗಳು ಮತ್ತು ವರ್ಷದಲ್ಲಿ ಮರಣ ಹೊಂದಿದ್ದನೆಂದು ನನಗೆ ನಿಖರವಾಗಿ ಹೇಳಲು ಆಗುವುದಿಲ್ಲ. ಸುಬಾನ್ ಜೀಗೆ ಇಬ್ಬರು ಮಕ್ಕಳು ಇದ್ದು, ಅವರ ಹೆಸರು ವಿಠಲ ಮತ್ತು ಶಂಕರ ಆಗಿರುತ್ತದೆ. ಸದರಿ ವಿಠಲ ಈತನಿಗೆ ಇಬ್ಬರು ಹೆಣ್ಣು ಮಕ್ಕಳಿದ್ದು, ಅವರ ಹೆಸರು ಚಂದ್ರಕಲಾ ಮತ್ತು ಶಶಿಕಲಾ ಆಗಿರುತ್ತದೆ.

ನಾನು ದಾವಾ ಆಸ್ತಿಗೆ ಸಂಬಂಧಿಸಿದ ಕಾಗದ ಪತ್ರಗಳನ್ನು ನೋಡಿರುತ್ತೇನೆ. ಪ್ರಮಾಣ ಪತ್ರ ಬರೆಯಲು ನಾನೇ ವಕೀಲರಿಗೆ ಮಾಹಿತಿ ನೀಡಿರುತ್ತೇನೆ. ದಾವಾ ಆಸ್ತಿಯ ಬಗ್ಗೆ ನನಗೆ ಯಾವುದೇ ಮಾಹಿತಿ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ನ್ಯಾಯಾಲಯಕ್ಕೆ ಸಾಕ್ಷಿಯನ್ನು ನೀಡುವಂತೆ ನನಗೆ ನ್ಯಾಯಾಲಯದಿಂದ ಯಾವುದೆ ಸಮನ್ಸ್ ಬಂದಿರುವುದಿಲ್ಲ ಎಂದರೆ ಸರಿ. ನನ್ನ ಪ್ರಮಾಣ ಪತ್ರದಲ್ಲಿ ಬರೆದಿರುವ ವಿಷಯಗಳು ಸುಳ್ಳಾಗಿದ್ದು, ವಾದಿಗಳಿಗೆ ಸಹಾಯ ಮಾಡಲೆಂದು ನಾನು ಈ ದಾವೆಗೆ ಅನುಕೂಲವಾಗುವಂತೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ 2 ರಿಂದ 9ನೇ ಪ್ರತಿವಾದಿಗಳ ಪರ ಶ್ರೀ ಆರ್.ಆರ್.ಆರ್. ವಕೀಲರಿಂದ:</u>**

2 ರಿಂದ 9ನೇ ಪ್ರತಿವಾದಿಗಳ ಪರ ವಕೀಲರು ಹಾಜರಿದ್ದು, 10ನೇ ಪ್ರತಿವಾದಿಯ ಪರ ವಕೀಲರು ಮಾಡಿದ ಪಾಟೀ ಸವಾಲನ್ನೆ ಅಳವಡಿಸಿಕೊಳ್ಳುವುದಾಗಿ ನಿವೇದಿಸಿಕೊಂಡಿರುತ್ತಾರೆ.

**ಮರು ವಿಚಾರಣೆ : ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ. ಹೇ . ಕೇ. ಸರಿ ಇದೆ.

ಸಿವಿಲ್ ನ್ಯಾಯಾಧೀಶರು, ಚಿತ್ತಾಪೂರ.